ಶ್ರೀ ಬಿ. ಆರ್. ಯಾವಗಲ್ :- ಮಾನ್ಯ ಉಪ ಸಭಾಪತಿಯವರೇ, ಮಾನ್ಯ ಸದಸ್ಯರಾದ ಉದಾಸಿಯವರು ಹೇಳಿದ ವಿಚಾರದಲ್ಲಿ ತಾವು ನಿನ್ನೆ ಏನು ಪ್ರಸ್ತಾಪ ಮಾಡಿದ್ದಿರಿ ಅದರ ಬಗ್ಗೆ ಹೇಳುವುದಾದರೆ, ಕಿರ್ಲೋಸ್ಕರ್ ಕಂಪೆನಿಯವರು ಅದನ್ನು (ಜನರೇಟರ್) ಹಾಕಿ ಡೆಮಾನ್ಸ್ಟ್ರೇಟ್ ಮಾಡಿದ್ದಾರೆ. ನೀವು ಪವರ್ ಕಟ್ ಮಾಡುವಾಗ ಇದಕ್ಕೆ ಸಬ್ಸಿಡಿಯನ್ನು ಕೊಟ್ಟರೆ ಅನುಕೂಲವಾಗುತ್ತದೆ.

. ಪ್ರಕಟಣೆಗಳು

(i) ವಿಧಾನ ಸಭಾಸದಸ್ಯರನ್ನು ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ.

ಉಪಾಧ್ಯಕ್ಷರು :- ಈ ಕೆಳಕಂಡ ಮಾನ್ಯ ವಿಧಾನ ಸಭಾ ಸದಸ್ಯರನ್ನು ತಾ : 22-9-95 ರಂದು ಮಧ್ಯಾಹ್ನ 12 ಗಂಟೆಗೆ ಕರ್ನಾಟಕ ಪೋಲಿಸ್ ಕಾಯಿದೆ 70-71 ನೇ ಕಲಂ ಮೇರೆಗೆ ವಿಧಾನಸೌಧದ ಪಶ್ಚಿಮ ದ್ವಾರದಲ್ಲಿ ಬಂಧಿಸಿ ನಂತರ ಅದೇ ದಿನ 12.35 ಗಂಟೆಗೆ ಬಿಡುಗಡೆ ಮಾಡಲಾಯಿತು ಎಂದು ವಿಧಾನ ಸೌಧದ ಪೋಲಿಸ್ ಸಬ್ಇನ್ಸ್ಪೆಕ್ಟರ್‌ರವರು ತಿಳಿಸಿರುತ್ತಾರೆಂದು ತಿಳಿಸುತ್ತೇನೆ. ಅವರು ಯಾರೆಂದರೆ : ಶ್ರೀಯುತರಾದ, ವಾಟಾಳ್ ನಾಗರಾಜ್, ಧರ್ಮಸಿಂಗ್, ಮಂಜುನಾಥ ಸಿ. ಕುನ್ನೂರು, ವಿ. ಎಸ್. ಕೌಜಲಗಿ, ಬಿ. ಎಸ್. ಪಾಟೀಲ್, ವಸಂತ ಸಾಲಿಯಾನ, ಶಿವಶಂಕರಪ್ಪ, ಆರ್. ಎಂ. ಕಲೂತಿ, ಡಿ. ಎಂ. ಇನಾಂದಾರ್, ಕಾಗೋಡು ತಿಮ್ಮಪ್ಪ, ಮಲಕರೆಡ್ಡಿ, ಶಿವರಾಮು ಎ.ಟಿ. ರಾಮಸ್ವಾಮಿ ಪ್ರಕಾಶ್ ಹುಕ್ಕೇರಿ, ಮಲ್ಲಿಕಾರ್ಜುನ ಖರ್ಗೆ, ಟಿ.ಬಿ. ಜಯಚಂದ್ರ, ಸಗೀರ್ ಅಹ್ಮದ್, ರಾಮಲಿಂಗಾರೆಡ್ಡಿ, ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ, ಎಸ್. ಪಿ. ಮುದ್ದಹನುಮೇಗೌಡ, ಆರ್. ನಾರಾಯಣ್ ಮತ್ತು ಬಿ. ಬಿ. ಚಿಮ್ಮನಕಟ್ಟಿ.

ಇನ್ನೊಂದು ಪ್ರಕಟಣೆ ಎಂದರೆ :

(ii) ಹತ್ತನೆಯ ವಿಧಾನ ಸಭೆಯ ಮೂರನೆಯ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ :-

ಹತ್ತನೇ ವಿಧಾನ ಸಭೆಯ ಮೂರನೆಯ ಅಧಿವೇಶನದಲ್ಲಿನ ಇಲ್ಲಿಯವರೆಗೆ ನಡೆದ ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಸೋಮವಾರ, ದಿನಾಂಕ 7 ನೇ ಆಗಸ್ಟ್ , 1995 ರಂದು ಪ್ರಾರಂಭವಾದ ಈ ಸದನವು ಇಪ್ಪತ್ತಾರು ದಿನಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿರುತ್ತದೆ. ಈ ಅವಧಿಯಲ್ಲಿ ಸದನಕ್ಕೆ ಮೊಟ್ಟಮೊದಲ ಬಾಡಿಗೆ ಆಯ್ಕೆಯಾಗಿ ಬಂದಿರುವ ಎಪ್ಪತ್ಮೂರು (73) ಸದಸ್ಯರುಗಳು ಸಹ, ವಿವಿಧ ಕಾರ್ಯಕಲಾಪಗಳಲ್ಲಿ ಭಾಗವಹಿಸಿರುತ್ತಾರೆ.

ಇತ್ತೀಚಿಗೆ ನಿಧನರಾದ (15) ಹದಿನೈದು ಗಣ್ಯರುಗಳ ಗೌರವಾರ್ಥ ಸಂತಾಪ ನಿರ್ಣಯವನ್ನು ಅಂಗೀಕರಿಸಲಾಯಿತು.

ನಿಯಮ 167 ರ ಅಡಿಯಲ್ಲಿ ಅವಿಶ್ವಾಸ ನಿರ್ಣಯವನ್ನು ಸ್ವೀಕರಿಸಿದ್ದು, 3 ದಿನಗಳು ಚರ್ಚೆ ನಡೆದು ಮತಕ್ಕೆ ಹಾಕಿದಾಗ ತಿರಸ್ಕೃತವಾಯಿತು.

ಈ ಅವಧಿಯಲ್ಲಿ 3,050 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 419 ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಹಾಗೂ 2,396 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲಾಯಿತು. ಹನ್ನೊಂದು ದಿವಸ ಪ್ರಶ್ನೋತ್ತರ ನಡೆಯದ ಕಾರಣ ಸದರಿ ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಗಿದೆ.

ನಿಯಮ 58 ರ ರೀತ್ಯಾ ಏಳು ಅಲ್ಪಕಾಲಾವಧಿ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಈ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವುದಿಲ್ಲ.

ಈ ಅಧಿವೇಶನದ ಅವಧಿಯಲ್ಲಿ ಹದಿನೈದು ವಿಷಯ ಸಮಿತಿಗಳು ಸದನಕ್ಕೆ ವರದಿಯನ್ನು ಒಪ್ಪಿಸಿದರು.

ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಹತ್ತು ವರದಿಗಳನ್ನು ಸಭೆಯ ಮುಂದೆ ಮಂಡಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯು ತನ್ನ ಎರಡನೇ ವರದಿಯನ್ನು ಸಮಿತಿಯ ಅಧ್ಯಕ್ಷರ ಪರವಾಗಿ, ಮಾನ್ಯ ಸಭಾಧ್ಯಕ್ಷರು ವರದಿಯನ್ನು ಮಂಡಿಸಿದರು.

ಎರಡುನೂರ ಹದಿನಾಲ್ಕು ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿ ಆ ಪೈಕಿ ಹತ್ತೊಂಬತ್ತು ಗಮನ ಸೆಳೆಯುವ ಸೂಚನೆಗಳಿಗೆ ಸಂಬಂಧ ಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆಯನ್ನು ನೀಡಿರುತ್ತಾರೆ.

ಹದಿನಾಲ್ಕು ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ನಾಲ್ಕು ಅರ್ಜಿಗಳನ್ನು ಸದನದಲ್ಲಿ ಮಂಡಿಸಲಾಯಿತು.

ಅರ್ಧ ಗಂಟೆ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಯಾವುದನ್ನೂ ಚರ್ಚೆಗೆ ತೆಗೆದುಕೊಳ್ಳಲಿಲ್ಲ.

ನಿಯಮ 351 ರ ಅಡಿಯಲ್ಲಿ, ಒಂದು ನೂರ ಅರವತ್ಮೂರು ಸೂಚನೆಗಳನ್ನು ಸ್ವೀಕರಿಸಿದ್ದು, ಎಪ್ಪತ್ತೊಂಬತ್ತು ಸೂಚನೆಗಳಿಗೆ ಸಂಬಂಧಿಸಿದ ಮಂತ್ರಿಗಳು ಹೇಳಿಕೆ ನೀಡಿರುತ್ತಾರೆ.

ವಾಸಗಿ ಸದಸ್ಯರ ಒಂದು ನಿರ್ಣಯವನ್ನು ಸ್ವೀಕರಿಸಿದ್ದು, ಚರ್ಚೆಗೆ ತೆಗೆದುಕೊಂಡಿರುವುದಿಲ್ಲ.

ನಿಯಮ 191 ರ ರೀತ್ಯಾ ಹನ್ನೆರಡು ಹಕ್ಕುಚ್ಯುತಿ ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪ್ರಸ್ತಾವನೆಗೆ ಅನುಮತಿಯನ್ನು ನಿರಾಕರಿಸಲಾಗಿದೆ.

ಈ ಅವಧಿಯಲ್ಲಿ ಹದಿನೈದು ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪ್ರಸ್ತಾಪನೆಗೆ ಅನುಮತಿಯನ್ನು ತಡೆಹಿಡಿಯಲಾಯಿತು.

ನಿಯಮ 69 ರಡಿಯಲ್ಲಿ ಹನ್ನೆರಡು ಪ್ರಸ್ತಾವನೆಗಳನ್ನು ಸ್ವೀಕರಿಸಿದ್ದು, ಒಂದು ಪ್ರಸ್ತಾವನೆಯನ್ನು ಬರಗಾಲದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

ಈ ಅವಧಿಯಲ್ಲಿ 226 ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು.

1995-96 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಎಂಟು ದಿವಸ ಚರ್ಚೆ ನಡೆಸಿ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

1995-96 ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಅನ್ನು ಹಣಕಾಸು ಮಂತ್ರಿಗಳು ಸಭೆಯ ಮುಂದೆ ಮಂಡಿಸಿದರು.

ಈ ಅವಧಿಯಲ್ಲಿ ಒಟ್ಟು ಹದಿನೈದು ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಯಿತು. ಆ ಪೈಕಿ ಹದಿನಾಲ್ಕು ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು.

ಒಂದು ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಿ ಸಮಿತಿಯು ಚರ್ಚಿಸಿ ಮಾಡಿದಂತೆ ವಿಧೇಯಕವನ್ನು ಸದನವು ಅಂಗೀಕರಿಸಿತು.

ಒಂದು ಶಾಸನಾತ್ಮಕ ನಿರ್ಣಯವನ್ನು ಚರ್ಚಿಸಿ ಅಂಗೀಕರಿಸಲಾಯಿತು.

ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ವಿಧಾನ ಸಭೆಯಿಂದ ನಾಲ್ಕು ಸದಸ್ಯರನ್ನು ಆಯ್ಕೆ ಮಾಡಲಾಯಿತು.

ವಿವಿಧ ವಿರೋಧ ಪಕ್ಷಗಳ ಸದಸ್ಯರು ನಾಲ್ಕು ಭಾರಿ ಸಭಾತ್ಯಾಗ ಮಾಡಿರುತ್ತಾರೆ. ಹಾಗೂ ಧರಣಿಯನ್ನು ನಡೆಸಿರುತ್ತಾರೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ನಡೆಸಲು ನನ್ನೊಡೆ ಸಹಕರಿಸಿದ, ಈ ಸದನದ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳಿಗೂ, ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರಿಗೂ, ವಿವಿಧ ಪಕ್ಷಗಳ ಮುಖಂಡರಿಗೂ, ಮಂತ್ರಿ ಮಂಡಲದ ಎಲ್ಲಾ ಸದಸ್ಯರಿಗೂ, ವಿಧಾನ ಸಭೆಯ ಎಲ್ಲಾ ಸದಸ್ಯರಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ದೂರದರ್ಶನದವರಿಗೂ, ವಿವಿಧ ಇಲಾಖಾ ಅಧಿಕಾರಿಗಳಿಗೂ, ಕಡೆಯದಾಗಿ ವಿಧಾನ ಮಂಡಲದ ಅಧಿಕಾರಿಗಳಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈಗ ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6-20 ಗಂಟೆಗೆ ಅನಿರ್ಧಿಷ್ಟ ಕಾಲದವರೆಗೆ ಸಭೆಯು ಮುಂದೂಡಲ್ಪಟ್ಟಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಗಳನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)